ಓ ಎಸ್ ನಂ.96/2023

ಪಿ.ಡಬ್ಲ್ಯೂ-1 ರಮಾ ಗಂಡ ಪ್ರಹ್ಲಾದರಾವ್

**(ಇಂದು ದಿನಾಂಕಃ 13-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಂದುವರೆದ ಪಾಟೀ ಸವಾಲುಃ ಶ್ರೀ ಸುಧಾಕರ ರಾವ್ ವಕೀಲರಿಂದ.

ಈಗ ಹಾಜರುಪಡಿಸಿದ ನಿಪಿ-೩೧ ರಿಂದ ನಿಪಿ-೭೭ ರ ದಾಖಲೆಗಳನ್ನು ನಾನೇ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ನಾನು ನೋಡಿರುತ್ತೇನೆ. ನಾನು ದಾವಾ ಆಸ್ತಿಗಳಿಗೆ ಸಂಬಂಧಿಸಿದ್ದರಿಂದ ಸದರಿ ದಾಖಲೆಗಳನ್ನು ಹಾಕಿರುತ್ತೇನೆ. ಯಾವ ದಾವಾ ಆಸ್ತಿ ಕುರಿತು ಸದರಿ ದಾಖಲೆಗಳಣ್ನು ಹಾಕಿರುತ್ತೀರಿ ಎಂದರೆ ಸಾಕ್ಷಿ ಹೊಲದ ಕುರಿತು ಸದರಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನಿಪಿ-೩೧ ರಿಂದ ನಿಪಿ-೭೭ ರ ದಾಖಲೆಗಳ ಕುರಿತು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-೩೧ ರ ಪಹಣಿ ಯಾವ ದಾವಾ ಆಸ್ತಿಗೆ ಸಂಬಂಧಿಸಿರುತ್ತದೆ ಎಂದರೆ ಸಾಕ್ಷಿಯು ನನಗೆ ಕನ್ನಡ ಬರದ ಕಾರಣ ಅದನ್ನು ಹೇಳಲು ಆಗುವುದಿಲ್ಲ ಎನ್ನುತ್ತಾರೆ.

೨. ಸರ್ವೆ ನಂಬರ ೪೧ ಈಗಾಗಲೇ ೧ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಅದು ನಮ್ಮ ತಾತನ ಆಸ್ತಿಯಾಗಿರುತ್ತದೆ ಎನ್ನುತ್ತಾರೆ. ಸದರಿ ಆಸ್ತಿಯ ನಮ್ಮ ತಾತನ ಆಸ್ತಿಯೆಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಮ್ಮ ತಾತನ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾತನ ಹೆಸರು ಗೋವಿಂದರಾವ್ ಕುಲಕರ್ಣಿ ಆಗಿರುತ್ತದೆ. ನಮ್ಮ ತಂದೆಯ ತಂದೆ ಗೋವಿಂದರಾವ್ ಇರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಅಂತಹ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

೩. ನಿಪಿ-೩೧ ರಿಂದ ನಿಪಿ-೭೭ರ ದಾಖಲೆಗಳ ಕುರಿತು ನನಗೆ ಯಾವುದೇ ಮಾಹಿತಿ ಇರದೆ ಇದ್ದರೂ ಅವುಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ಗೋವಿಂದರಾವ್ ರವರು ನಮ್ಮ ತಂದೆಯನ್ನು ದತ್ತಕ ಪಡೆದ ಕುರಿತು ಬರೆಸಿರುತ್ತಿರಾ ಎಂದರೆ ಸಾಕ್ಷಿ ಆ ಕುರಿತು ದಾಖಲೆ ನೀಡಿರುತ್ತೇನೆ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತು ವಾದಪತ್ರದಲ್ಲಿ ಆ ರೀತಿ ಬರೆಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದು ನನ್ನ ವಾದಪತ್ರದಲ್ಲಿ ಬರೆಸಿರುತ್ತೇನೆ. ೩ ದಾವಾ ಜಮೀನುಗಳು ಯಾರಿಂದ ಯಾರಿಗೆ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

೪. ಈಗ ನನಗೆ ತೋರಿಸಿದ ಪಹಣಿ ಸರ್ವೆ ನಂಬರ ೪೧ ರ ಪಹಣಿಯಾಗಿದ್ದು, ಅದು ಪದ್ಮಾವತಿ ಗೋವಿಂದರಾವ್ ರವರ ಹೆಸರಿನಲ್ಲಿ ಇರುತ್ತದೆ ಎಂದು ಗುರುತಿಸಿದ್ದರಿಂದ ಅದನ್ನು ಗುರುತಿಸುವ ಸಲುವಾಗಿ ನಿಡಿ-೧ ಎಂದು ಅದರ ಅನುವಾದಿತ ಪ್ರತಿಯನ್ನು ನಿಡಿ-೧ (ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ಪಹಣಿ ಸರ್ವೆ ನಂಬರ ೪೩ ರ ಪಹಣಿಯಾಗಿದ್ದು, ಅದು ಪದ್ಮಾವತಿ ಗಂಡ ಗೋವಿಂದರಾವ್ ರವರ ಹೆಸರಿನಲ್ಲಿ ಇರುತ್ತದೆ ಎಂದು ಗುರುತಿಸಿದ್ದರಿಂದ ಅದನ್ನು ಗುರುತಿಸುವ ಸಲುವಾಗಿ ನಿಡಿ-೨ ಎಂದು ಅದರ ಅನುವಾದಿತ ಪ್ರತಿಯನ್ನು ನಿಡಿ-೨ (ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ಪಹಣಿ ಸರ್ವೆ ನಂಬರ ೮೩ ರ ಪಹಣಿಯಾಗಿದ್ದು, ಅದು ಪದ್ಮಾವತಿ ಗಂಡ ಗೋವಿಂದರಾವ್ ರವರ ಹೆಸರಿನಲ್ಲಿ ಇರುತ್ತದೆ ಎಂದು ಗುರುತಿಸಿದ್ದರಿಂದ

ಅದನ್ನು ಗುರುತಿಸುವ ಸಲುವಾಗಿ ನಿಡಿ-೩ ಎಂದು ಅದರ ಅನುವಾದಿತ ಪ್ರತಿಯನ್ನು ನಿಡಿ-೩ (ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಆದಾಯ ತೆರಿಗೆ ತುಂಬಿದ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿ ಅದು ನಮ್ಮ ತಂದೆಯದು ಆಗಿರುತ್ತದೆ ಎಂದು ಗುರುತಿಸಿದ್ದರಿಂದ ಅದನ್ನು ನಿಡಿ-೪ ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಆಧಾರಕಾರ್ಡ ಮತ್ತು ಪ್ಯಾನಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿಗಳನ್ನು ತೋರಿಸಲಾಗಿ ಸಾಕ್ಷಿ ಅವು ತಮ್ಮ ತಂದೆಯ ದಾಖಲೆಗಳಾಗಿರುತ್ತವೆ ಎಂದು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಡಿ-೪ ರಿಂದ ನಿಡಿ-೭ ಎಂದು ಗುರುತಿಸಲಾಯಿತು. ನಿಡಿ-೪, ೬ ಮತ್ತು ೭ ರಲ್ಲಿ ನಮ್ಮ ತಂದೆಯ ಹೆಸರು ಪ್ರಹ್ಲಾದ ತಂದೆ ವೆಂಕಟೇಶ ಎಂದು ನಮೂದು ಇರುತ್ತದೆ.

೫. ಈಗ ನನಗೆ ತೋರಿಸಿದ ದಾಖಲೆ ನನ್ನ ತಂಗಿಯಾದ ೨ನೇ ವಾದಿಯ ಮದುವೆ ಆಮಂತ್ರಣ ಪತ್ರಿಕೆಯಾಗಿರುತ್ತದೆ. ಸಾಕ್ಷಿ ಸದರಿ ದಾಖಲೆಯನ್ನು ಗುರುತಿಸಿದ್ದರಿಂದ ಅದನ್ನು ನಿಡಿ-೮ ಎಂದು ಗುರುತಿಸಲಾಯಿತು. ನಿಡಿ-೮ ರಲ್ಲಿ ನಮ್ಮ ತಂದೆಯ ಹೆಸರು ಪ್ರಹ್ಲಾದ ಜೋಷಿ ಎಂದು ನಮೂದಿಸಲಾಗಿರುತ್ತದೆ. ನಿಡಿ-೮ ರಲ್ಲಿ ನಮೂದಿಸಿದ ಹಣಮಂತಾಚಾರ ಜೋಷಿರವರು ನಮ್ಮ ತಂದೆಯ ಅಣ್ಣನಾಗಿರುತ್ತಾರೆ. ಸದರಿ ಹಣಮಂತಾಚಾರ ಜೋಷಿರವರು ಜೀವಿತಾ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಹಣಮಂತಾಚಾರ ಜೋಷಿ ಮತ್ತು ಕೇಶವ ಜೋಷಿರವರು ಜೀವಿತಾ ಇದ್ದು, ಅಫಜಲಪೂರದಲ್ಲಿ ವಾಸವಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

೬.  ೨ನೇ ವಾದಿ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿ. ೨ನೇ ವಾದಿ ನನ್ನ ಜೊತೆ ದಾವೆ ಹಾಕಲು ಬರದೆ ಇದ್ದರೂ ಒತ್ತಾಯದಿಂದ ನಾನು ಅವರ ಹೆಸರು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಅಣ್ಣತಮ್ಮಂದಿರು ಯಾರೂ ಇಲ್ಲ ಎಂದು ನಾನು ದಾವೆಯಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ದತ್ತಕ ಹೋಗಿದ್ದರಿಂದ ನಾನು ಸದರಿ ವಿಷಯ ಅವಶ್ಯಕತೆ ಇರದೆ ಇದ್ದುದರಿಂದ ಬರೆಸಿರುವುದಿಲ್ಲ ಎನ್ನುತ್ತಾರೆ.

೭.  ನನಗೆ ಈಗ ತೋರಿಸಿದ ಆಧಾರಕಾರ್ಡ ನನ್ನ ತಂದೆಯ ಸಹೋದರನಾದ ಕೇಶವ ಜೋಷಿರವರದು ಇದೆ ಎಂದರೆ ಸಾಕ್ಷಿಯು ಅವರು ಕೇಶವ ಜೋಷಿ ಇದ್ದು, ನಮ್ಮ ತಂದೆ ದತ್ತಕ ಹೋದ ನಂತರ ನಾವು ಅವರ ಜೊತೆ ಯಾವುದೇ ಸಂಬಂಧ ಹೊಂದಿಲ್ಲ ಎಂದು ಹೇಳಿರುತ್ತಾರೆ. ಸದರಿ ದಾಖಲೆಯನ್ನು ಗುರುತಿಸುವ ಸಲುವಾಗಿ ನಿಡಿ-೯ ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಆಮಂತ್ರಣ ಪತ್ರಿಕೆಯಲ್ಲಿ ನಮ್ಮ ತಂದೆಯ ಹೆಸರು ಪ್ರಹ್ಲಾದ ಜೋಷಿ ಎಂದು ನಮೂದು ಇರುತ್ತದೆ. ಸದರಿ ದಾಖಲೆಯನ್ನು ನಿಡಿ-೧೦ ಎಂದು ಗುರುತಿಸಲಾಯಿತು. ನನಗೆ ೧ ರಿಂದ ೩ನೇ ದಾವಾ ಆಸ್ತಿಗಳ ಕುರಿತು ಯಾವುದೇ ಮಾಹಿತಿ ಇರದೆ ಇದ್ದರೂ ಒಂದು ಸುಳ್ಳು ಕೇಸನ್ನು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.